Doc - 494
T-P-2

Reg no KRN 12 — For Influential Publicity — 21-11-76

ಸತ್ಯಮೇವ ಜಯತೇ ವಜ್ರಮಹೋತ್ಸವ ನೇರವೇರಿಸಿರುವ ಪತ್ರಿಕೆ

ಸತ್ಯವಾದಿ
SATYAVADI

60th Diamond Jubilee Year
60 ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ 5 ಪೈಸೆ

ಜಿಲ್ಲಾಧಿಕಾರಿಗಳವರ ಪ್ರಕಟಣೆ

ಮೈಸೂರು — ಮೈಸೂರು ಜಿಲ್ಲೆಯಲ್ಲಾಗಲಿ ಅಥವಾ ರಾಷ್ಟ್ರದ ಯಾವ ಭಾಗದಲ್ಲಿ ಆಗಲಿ ರಾಷ್ಟ್ರೀಯ ಕುಟುಂಬ ಯೋಜನೆಯ ಜಾರಿ ಕುರಿತು ಪ್ರತಿಕೂಲ ಹೊರಪಡಿಸುವ ಯಾವ ವಿಷಯವು ಜಿಲ್ಲೆ ಅಥವಾ ಯಾವ ಪತ್ರಿಕೆಯಲ್ಲೂ ಪ್ರಕಟಿಸ ಬಾರದೆಂದು, ಜಿಲ್ಲೆಯ ಯಾವ ಪತ್ರಿಕೆಗಳೂ ಪತ್ರಿಕಾ ಬಾತ್ಮೀದಾರರಿಂದಾಗಲೀ ಮತ್ತಾತ್ಮರಿಂದಲಾಗಲಿ ಕಳುಹಿಸಲ್ಪಡಕೂಡದೆಂದು, ಹಾಗೆ ಮಾಡಿದರೆ ಈ ಸಂಬಂ ಧಕ್ಕೆ ಇರುವ ಶಿಕ್ಷೆಗೆ ಒಳಗಾಗಬೇಕೆಂದು ಜಿಲ್ಲಾಧಿಕಾರಿಗಳು ಪ್ರಕಟಿಸಿದ್ದಾರೆ.

○

ಜಾಕ್‌ಪಾಟ್ ಮುಂದಕ್ಕೆ ಹೋಯಿತು

ಬೆಂಗಳೂರು — ಶನಿವಾರದ ಕುದುರೆ ಪಂದ್ಯದಲ್ಲಿ ಜಾಕ್‌ಪಾಟ್ ರೂ. 48 682 ಮುಂದಕ್ಕೆ ಹಾಕಲಾಯಿತು.

○

ಕುದುರೆ ಪಂದ್ಯ ರದ್ದಾಯಿತು

ಮದರಾಸು — ರೇಸುಕೋರ್ಸ್ ವಿಪರೀತ ಮಳೆಯಿಂದ ಉಪಯೋಗಕ್ಕೆ ಬರ ಲಾಗದ ಕಾರಣ ಶನಿವಾರದ ಕುದುರೆ ಪಂದ್ಯ ರದ್ದಾಯಿತು.

★

ಮುಖವಾಡ ಧರಿಸಿದವರಿಂದ ಆಭರಣ ಅಪಹರಣ

ತುಮಕೂರು — ಗುಬ್ಬಿಯ ಹತ್ತಿರ ಒಂದು ಮನೆಯಲ್ಲಿ 4 ಮಂದಿ ಪುರು ಷರು ಇಬ್ಬರು ಮಹಿಳೆಯರನ್ನು ಆಕ್ರಮಣ ಮಾಡಿ ಅವರ 1900 ರೂ. ಬೆಲೆಯ ಚಿನ್ನದ ಸರಗಳನ್ನು ಕಿತ್ತುಕೊಂಡು ಪರಾರಿ ಆದರು.

★

ಪ್ರಧಾನಿ ಇಂದಿರಾರವರ ಕುರಿತು ಪ್ರಶಂಸೆ

ಬೆಂಗಳೂರು — ಒಂದು ಸಮಾರಂಭದಲ್ಲಿ ಮಾತನಾಡುತ್ತಾ, ಬಲ್ಗೇರಿಯಾ ಅಧ್ಯಕ್ಷ ಶ್ರೀ ಟೊಡೊರ್ ಜಿವ್‌ಕೋವ್‌ರವರು ಶ್ರೀಮತಿ ಇಂದಿರಾಗಾಂಧಿಯವರನ್ನು ಸಮ ಕಾಲೀನ ಭಾರತ ನಿರ್ಮಾಪಕರೆಂದು ಪ್ರಶಂಸಿಸಿದರು.

★

ಲೇವಾದೇವಿಗಾರರ ಮೇಲೆ ಕೇಸ್ ರಿಜಿಸ್ಟರ್

ದಾವಣಗೆರೆ — ಋಣ ಪರಿಹಾರ ಶಾಸನದ ರೀತ್ಯಾ ಹೇಳಿಕೆಗಳನ್ನು ಹಾಜ ರ್ಮಾಡದಿದ್ದ ನೂರರವತ್ತೆರಡು ಲೇವಾದೇವಿ ಮತ್ತು ಗಿರವಿ ಅಂಗಡಿಯವರ ಮೇಲೆ ಕೇಸ್ ರಿಜಿಸ್ಟರ್ ಮಾಡಿಕೊಳ್ಳಲಾಗಿದೆ.

○

ಸಿರಸಿಯಲ್ಲಿ ಪ್ರವಾಹ — ಮಳೆಯಿಂದ

ಸಿರಸಿ — ಈ ನಗರದಲ್ಲಿ ಶನಿವಾರ ಭಾರಿ ಮಳೆ ಆಗಿ ಊರಿನಲ್ಲಿ ಭಾರಿ ಪ್ರವಾ ಹ ಉಂಟಾಯಿತು.

ಭಾರಿ ಶ್ರೀಮಂತನ ಪತ್ತೆ

ಬೊಂಬಾಯಿ — ನಗರದಲ್ಲಿ ಕಟ್ಟಡ ಪದಾರ್ಥಗಳನ್ನು ಸರಬರಾಜು ಮಾಡುವ ವನೊಬ್ಬನು 6 ಟ್ರಕ್‌ಗಳು, 2 ಕಾರ್ಸು, 3 ಅಂತಸ್ತಿನ ಕಟ್ಟಡ, ವಿಶಾಲ ಫ್ಲಾಟ್ ಹೊಂದಿದ್ದರೂ ಸಂಪತ್ತು ತೆರಿಗೆ ಕೊಡದಿ ರುವುದನ್ನು ಪತ್ತೆ ಮಾಡಲಾಯಿತು ವಶ ಪಡಿಸಿಕೊಳ್ಳಲಾದ ಲೆಕ್ಕ ಪುಸ್ತಕಗಳಿಂದ ಅವರು 6 ಲಕ್ಷ ರೂಪಾಯಿಗಳ ಆದಾಯ ಮುಚ್ಚುವರಿ ಮಾಡಿರುವುದು ಹೊರಪಟ್ಟಿ ರುವುದು.

★

ಮೂರು ತಿಂಗಳು ಜೈಲುವಾಸ

ನ್ಯೂಯಾರ್ಕ್ — 1970 ರಲ್ಲಿ ಭಾ ರತ ಮತ್ತು ಪಾಕಿಸ್ತಾನ ಸೇರಿ ಸಾಗರದ ಆಚೆಯ ದೇಶಕ್ಕೆಗಳಿಗೆ ಕಡಮೆ ತೂಕದ ಧಾನ್ಯ ಸಾಗಣೆ ಮಾಡಿದ ಅಪಾದನೆಗಾಗಿ ಅಮೇರಿಕಾ ಧಾನ್ಯ ಕಂಪೆನಿಯ ಫಿಲಿಪ್ ಮೆಕ್ ಕೊಲ್‌ಗೆ ನ್ಯೂ ಆರ್ಲಿನ್ಸ್‌ನ ಫೆಡ ರಲ್ ಕೋರ್ಟ್ 3 ತಿಂಗಳು ಜೈಲುವಾಸ ವಿಧಿಸಿತು.

★

ಪುರುಷರ ವಿರುದ್ಧವಲ್ಲ

ಜವಾಹರನಗರ — ಮಹಿಳೆಯರ ಸ್ವ ತಂತ್ರ ಚಳುವಳಿ ಪುರುಷರ ವಿರುದ್ಧವಾಗಿ ಲ್ಲವೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು ತಿಳಿಸಿದರು

★

ಬಾಬೂವಾರ ಕರೆ

ಜವಾಹರನಗರ — ಬಡವರ ಮತ್ತು ಹಿಂದುಳಿದ ಜನಾಂಗದ ವಿಕ್ಕಳ ವಿದ್ಯಾ ಭ್ಯಾಸಕ್ಕೆ ರಾಜ್ಯಗಳ ಭಾರಿ ಸಹಾಯ ಕೈ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬರೂವಾ ಕರೆ ಕೊಟ್ಟರು ವಿದ್ಯಾರ್ಥಿಗಳಿಗೆ ಹೆಚ್ಚಿಚ್ಚು ವ್ಯಾಸಂಗ ಮಾಡುವಂತೆ ತಿಳಿಸಿದರು.

★ ಬೆಂಗಳೂರು ಡೈರಿ ಹಾಲು ಮೊಸರು ಬೆಲೆಯನ್ನು ಕೇಳಿಡ 10 ಇಳಿಸಿದೆ

ದಸರಾ ವಸ್ತು ಪ್ರದರ್ಶನ

23 ನೇ ತಾ ಸಂಜೆ 6 ಚಿಂತನಪಲ್ಲಿ ಕೃಷ್ಣಮೂರ್ತಿಯವರಿಂದ ಹಿಡಿದುಗಾರಿಕೆ 7 ಚಲನಚಿತ್ರ ತಾರೆ ಮತ್ತು ನೃತ್ಯಗಾರ್ತಿ ಕುಮಿ ಜಯಲಲಿತಾ ಮತ್ತು ಸಂಗಡಿಗರಿಂದ ನೃತ್ಯ

●

ಮೂರು ದಿನಗಳ ಹಣ ನೀಡಿಕೆ

ದಸರಾ ವಸ್ತು ಪ್ರದರ್ಶನದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀಗಳಾದ ಡಿ. ಜಯದೇವರಾಜ ಅರಸ್ ಮತ್ತು ಬಿ ಸಿ ಲಿಂಗಯ್ಯ ಅವರು ಪತ್ರಿಕಾ ಸಂಮೇಳನ ದಲ್ಲಿ ಮಾತನಾಡುತ್ತಾ, ಮೈಸೂರು ನಗರ ಜಿಲ್ಲ ಕಾಂಗ್ರೆಸ್ ಕೇಂದ್ರ ಮಂಡಲಿ ರ ಚಿಸಿರುವ 6 ವಿಭಾಗ ಜಿಲ್ಲ ಅಭಿವೃದ್ಧಿ ಸಮಿತಿ ಮೈಸೂರು ನಗರದ ವ್ಯಾಪ್ತಿಯಿಂದ ಪ್ರಾಥಮಿಕ, ಮಾಧ್ಯಮಿಕ ಶಾಲೆ ಮಕ್ಕಳ ಸೌಕರ್ಯಾರ್ಥ ಭಾರಿ ಯೋಜನೆ ಹಾಕಿಕೊಂಡಿದೆ ಎಂದು ನುಡಿದು, ಈ ನಿಧಿಗೆ ಪ್ರಥಮ ಕಾಣಿಕೆ ಯಾಗಿ ದಸರಾ ವಸ್ತು ಪ್ರದರ್ಶನ ಸಮಿತಿ ಯಿಂದ ಖರ್ಚು ಮಾತಾ 3 ದಿನಗಳ ಪ್ರ ವೇಶ ಹಣ ಕೊಡಲಾಗುವುದು ಎಂದರು. ನಿಧಿ ಸಂಗ್ರಹಣೆ ಉದ್ಘಾಟನೆಯನ್ನು ಶಿಕ್ಷಣ ಮಂತ್ರಿ ಶ್ರೀ ಯಾಹ್ಯರವರ ಅಧ್ಯಕ್ಷತೆ ಯಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವ ರಾಜ ಅರಸರು ಉದ್ಘಾಟಿಸುವರು. ಈ ಕಾರ್ಯಕ್ರಮ ಡಿಸೆಂಬರ್ 12 ನೇ ತಾ ಇದೆ

★

ಅಜೀಜ್ ಸೇಟ್‌ರಿಗೆ ಸನ್ಮಾನ

ಬೆಂಗಳೂರು — ಮಾಜಿ ಮಂತ್ರಿ, ಹಾಗೂ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆ ಅಧ್ಯಕ್ಷರು ಆದ ಶ್ರೀ ಅಜೀಜ್ ಸೇಟ್‌ರನ್ನು ಡಿಸೆಂಬರು ಕಡೆಯ ವಾರ ದಲ್ಲಿ ಸನ್ಮಾನಿಸಲು ಒಂದು ಸ್ವಾಗತ ಸಮಿತಿ ರಚನೆ ಆಗಿದೆ ಸೇಟ್‌ರವರ ಸಮಾಜ ಸೇವೆ ಮಾನ್ಯ ಮಾಡಲು ಒಂದು ನಿಧಿ ಅರ್ಪಿಸಲಾಗುವುದು.

ಮೈಸೂರು ಜಿಲ್ಲೆಯಲ್ಲಿ ಕುಟುಂಬ ಯೋಜನೆ

ಈ ಜಿಲ್ಲೆಯಲ್ಲಿ ಆಕ್ಟೋಬರು ಕಡೆಯ ವರೆಗೆ 19750 ಸಂತತಿ ನಿಯಂತ್ರಣ ಚಿಕಿತ್ಸೆ ನಡೆಸಲಾಗಿದೆಯೆಂದೂ, 2098 ಐ ಯು ಸಿ ಡಿ ಅಳವಡಿಸಿದ್ದು, 440392 ನಿರೋಧ್ ಹಂಚಲಾಗಿರುವುದಾಗಿ ಪ್ರಕಟವಾಗಿದೆ.

●

ಆತ್ಮೀಯ ಮಿತ್ರನಿಗೆಂತಲೂ ಮಿಗಿಲಾದ ವರವು ಬದುಕಿನಲ್ಲಿ ಬೇರೆ ಯಾವುದಿದೆ ? — ಸಿಸಿಲಿಯಾ

○

ಎಲ್ಲಾ ವಿಷಯುಗಳಲ್ಲಿಯೂ ಮಧ್ಯಮ ಮಾರ್ಗವೇ ಅತ್ಯುತ್ತಮ ; ಎಲ್ಲಾ ವಿಪರೀತವೂ ಮಾನವರಿಗೆ ತೊಂದರೆ ತರುತ್ತದೆ. — ಏರಿಸ್ಟಾಟಿಸ್

★

ಎಲ್ಲರಲ್ಲೂ ಸಭ್ಯರಾಗಿರಿ, ಅನೇಕರಲ್ಲಿ ಸ್ನೇಹಭಾವದಿಂದಿರಿ, ಕೆಲವರಲ್ಲಿ ಪರಿಚಿತರಾಗಿರಿ, ಒಬ್ಬರಿಗೆ ವಿಶ್ವಾಸಿಗರಾಗಿರಿ, ಯಾರಿಗೂ ಶತ್ರುವಾಗದಿರಿ.

— ಬೆನ್ಜಮಿನ್ ಫ್ರಾಂಕ್ಲಿನ್

ಭಾರತದಲ್ಲಿ ಗೋವಧೆ ಪೂರ್ಣ ನಿಷೇಧವಾಗಲಿ



"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಅರ್ಥಾತ್ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಸ್ವಾಮಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ.

Contribute Liberally to the National Defence Fund

ವುಡ್‌ಲಾಂಡ್ಸ್ 19 11 76 ರಿಂದ

ಅವೋಘ ಆರಂಭ

ಬಿಡುಗಡೆ

ಡಾ. ರಾಜಕುಮಾರ್ ಭಾರತಿ ಅಶ್ವತ್ಥ್ ನರಸಿಂಹರಾಜು ಅಭಿನಯ

ಕನ್ನಡ ಕಲರ್

ದಿನ 3 ಪ್ರದರ್ಶನಗಳು

ಅ ಪ ರಾ 19 11 76ರಿಂದ

ಪ್ರೇ ಮ ಬಂ ಧ ಂ

ಕಲರ್

ಶೋಭನಬಾಬು ವಾಣಿಶ್ರೀ ಸತ್ಯನಾರಾಯಣ ಅಭಿನಯ

ತೆಲುಗು ಪ್ರತಿ ದಿನ 3 ಪ್ರದರ್ಶನ

SHAKTI SUDHA

A Superb Tonic

Protect the Cow

Edited Printed and Published by Dharmapracharanirata M S. Krishna Rao (Proprietor) at the Satyavadi Press Chamarajapuram Mysore 4